# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1081 |
| ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16.12.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಪ್ಪುಕಲ್ಲು, ಕೆಂಪು ಕಲ್ಲು, ಮರಳುಗಾರಿಕೆ ಸಹಿತ ಮತ್ತು ಇತರ ಗಣಿ ಉತ್ಪನ್ನಗಳ ಬೇಡಿಕೆಯನ್ನು ಅಂದಾಜು ಮಾಡಲಾಗಿದೆಯೇ; ಈ ಕುರಿತಂತೆ ಜಿಲ್ಲಾವಾರು ಅಂದಾಜು ಮಾಹಿತಿ ವಿವರಗಳು ಇಲಾಖೆಯ ಬಳಿ ಲಭ್ಯವಿದೆಯೇ; ಗಣಿ ಉತ್ಪನ್ನಗಳ ಬೇಡಿಕೆ ಪೂರೈಕೆ ಸಮತೋಲನ ಕಾಯ್ದುಕೊಳ್ಳುವಲ್ಲಿ ಇಲಾಖೆಯ ಪರಿಹಾರದ ಕ್ರಮಗಳೇನು; | • ರಾಜ್ಯದಲ್ಲಿ ಮರಳಿನ ಬೇಡಿಕೆಯ ಪ್ರಮಾಣದ ಕುರಿತು ಅಂದಾಜು ಮಾಡಲಾಗಿದ್ದು, ಉಳಿದ ಉಪಖನಿಜಗಳ ಬೇಡಿಕೆಯ ಕುರಿತು ಯಾವುದೇ ಅಧ್ಯಯನ ನಡೆಸಿರುವುದಿಲ್ಲ.<br>• ರಾಜ್ಯದಲ್ಲಿ ಬೇಡಿಕೆ ಮತ್ತು ಪೂರೈಕೆಗೆ ಸಮತೋಲನ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಹೊಸದಾಗಿ ಖನಿಜ ಬ್ಲಾಕ್ ಗಳನ್ನು ಗುರುತಿಸಿ ಹರಾಜು ಮೂಲಕ ಗುತ್ತಿಗೆ ಮಂಜೂರು ಮಾಡಲಾಗುತ್ತಿದೆ.<br>• ರಾಜ್ಯದಲ್ಲಿ ಕಟ್ಟಡ ಕಲ್ಲು, ಎಂ-ಸ್ಯಾಂಡ್ ಪೂರೈಕೆಗಾಗಿ ದಿನಾಂಕ: 12-08-2016ರ ಪೂರ್ವದಲ್ಲಿ ಕಲ್ಲುಗಣಿ ಗುತ್ತಿಗೆ ಕೋರಿದ್ದ ಅರ್ಜಿಗಳನ್ನು ಪರಿಗಣಿಸಿ ಸಂಬಂದಪಟ್ಟ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಸ್ವೀಕೃತವಾದ ನಂತರ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ನಿಯಮಾನುಸಾರ ಕ್ರಮವಹಿಸಲಾಗಿದೆ.<br>• ಪಟ್ಟಾ ಜಮೀನುಗಳಲ್ಲಿನ ಉಪಖನಿಜ ನಿಕ್ಷೇಪಗಳ ಗಣಿಗಾರಿಕೆಗೆ ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ಸೂಚಿಸುವ ವ್ಯಕ್ತಿ/ ಸಂಸ್ಥೆಯವರಿಗೆ ಸಂಬಂದಪಟ್ಟ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ ಸ್ವೀಕೃತವಾದ ನಂತರ ಅರ್ಜಿದಾರರಿಗೆ ಲೈಸೆನ್ಸ್ ಮಂಜೂರಾತಿಗೆ ಕ್ರಮ ಕೈಗೊಳ್ಳಲಾಗಿದೆ.<br>• ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2025ರ ನಿಯಮ-3-Aಗೆ ದಿ:17-09-2025ರಂದು ತಿದ್ದುಪಡಿ ತಂದು ರಾಜಧನ ಹಾಗೂ ಇನ್ನಿತರ ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಕೆಂಪು ಕಲ್ಲು (ಲ್ಯಾಟರೈಟ್ ಬ್ರಿಕ್ಸ್) ಹಾಗೂ ಇಟ್ಟಿಗೆ ಮತ್ತು ಹೆಂಚು ಕಾರ್ಖಾನೆಗೆ ಅಗತ್ಯವಿರುವ ಮಣ್ಣನ್ನು ತೆಗೆದು ಸಾಗಾಣಿಕೆ ಮಾಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. |
| ಆ) | ಕೆಲವು ಗಣಿ ಉತ್ಪನ್ನಗಳು ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ಲಭ್ಯವಿದ್ದು, ಅದರ ಉಪಯೋಗವೂ ಪ್ರಾದೇಶಿಕ ಮತ್ತು ನಿರ್ಮಾಣ ಉದ್ದೇಶಕ್ಕೆ ಸೀಮಿತವಾಗಿರುವುದರಿಂದ ಅದಕ್ಕೆ ಪೂರಕವಾಗಿ ನಿಯಮಗಳನ್ನು ರೂಪಿಸುವಲ್ಲಿ ಇಲಾಖೆ ವಿಫಲವಾಗಿದೆಯೇ; | ಭಾರತ ಸರ್ಕಾರದಿಂದ ರಚಿತವಾಗಿರುವ ಎಂ.ಎಂ. ಡಿ&ಆರ್ ಕಾಯ್ದೆ-1957ಗೆ ಅನುಗುಣವಾಗಿ ರಾಜ್ಯಗಳು ಉಪಖನಿಜಗಳನ್ನು ತೆಗೆಯಲು ಉಪ ಖನಿಜ ರಿಯಾಯಿತಿ ನಿಯಮಗಳನ್ನು ರೂಪಿಸಬೇಕಾಗಿದೆ. ಆದ್ದರಿಂದ, ನಿರ್ದಿಷ್ಟ ಪ್ರದೇಶದಲ್ಲಿ ದೊರೆಯುವ ಉಪಖನಿಜಗಳನ್ನು ಪ್ರಾದೇಶಿಕ ಮತ್ತು ನಿರ್ಮಾಣ ಉದ್ದೇಶಕ್ಕಾಗಿ ಸೀಮಿತಗೊಳಿಸುವ ಕುರಿತು ನಿಯಮ ರೂಪಿಸಲು ಅವಕಾಶವಿರುವುದಿಲ್ಲ. |

| | | |
|---|---|---|
| ಇ) | ಕೃಷಿ ಮಾಡಲು ಸಾಧ್ಯವಿಲ್ಲದ ಕರಾವಳಿಯ ಪ್ರದೇಶಗಳಲ್ಲಿ ಯಥೇಚ್ಛವಾಗಿ ಲಭ್ಯವಿರುವ ಕೆಂಪು ಕಲ್ಲನ್ನು ಸರಳೀಕೃತ ಪರವಾನಿಗೆಯೊಂದಿಗೆ ಉತ್ಪನ್ನ ಮಾಡಲು ಇಲಾಖೆ ಯಾವ ರೀತಿ ಕ್ರಮವಹಿಸುತ್ತಿದೆ; | ಕರಾವಳಿ ಮತ್ತು ರಾಜ್ಯದ ಇತರೆ ಜಿಲ್ಲೆಗಳಲ್ಲಿ ದೊರೆಯುವ ಕೆಂಪುಕಲ್ಲು (ಲ್ಯಾಟರೈಟ್ ಬ್ರಿಕ್ಸ್) ತೆಗೆಯುವ ಸಂಬಂಧ ದಿನಾಂಕ:17-09-2025ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-3-A ತಿದ್ದುಪಡಿಯನ್ನು ಜಾರಿಗೆ ತಂದು ಸರಳೀಕರಣಗೊಳಿಸಿ, ಕೆಂಪು ಕಲ್ಲಿಗೆ ಸಂಬಂಧಿಸಿದಂತೆ ವಿಧಿಸಲಾಗುತ್ತಿದ್ದ ಶುಲ್ಕಗಳನ್ನು ಕಡಿಮೆಗೊಳಿಸಲಾಗಿದೆ.<br>ಈ ಸಂಬಂದ ವಿಧಾನ ಸಭೆಯ ಸನ್ಮಾನ್ಯ ಸಭಾಧ್ಯಕ್ಷರು, ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ಶಾಸಕರು ಹಾಗೂ ಮಾನ್ಯ ಜನಪ್ರತಿನಿದಿಗಳ ಜೊತೆಗೆ ಸಭೆ ನಡೆಸಿ ಬೇಡಿಕೆಗಳಿಗನುಗುಣವಾಗಿ ಕೆಂಪುಕಲ್ಲು ಪೂರೈಕೆಗೆ ಅಗತ್ಯ ಕ್ರಮ ವಹಿಸಲಾಗುತ್ತಿದೆ. |
| ಈ) | ಪರಿಪೂರ್ಣ ನಿಯಮಗಳನ್ನು ರೂಪಿಸದೆ ಅಡ್‌ಹಾಕ್ ಮಾದರಿಯಲ್ಲಿ ತಕ್ಷಣದ ಪರಿಹಾರದ ನೆಲೆಯಲ್ಲಿ ಕೃಷಿ ಭೂಮಿ ಸಮತಟ್ಟು ಮಾಡುವ ತಾತ್ಕಾಲಿಕ ವ್ಯವಸ್ಥೆಯಂತೆ ಕೆಂಪುಕಲ್ಲು ತೆಗೆಯಲು ಅನುಮತಿ ನೀಡಿದ ಪ್ರಕರಣಗಳಲ್ಲಿ ಎಷ್ಟು ಆಳದವರೆಗೆ ಗಣಿಗಾರಿಕೆ ಮಾಡಲು ಅವಕಾಶವಿದೆ; | ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-3-A ರಲ್ಲಿ ಕೃಷಿ ಭೂಮಿಯನ್ನು ಸಮತಟ್ಟು ಮಾಡಿ ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸಿಕೊಳ್ಳಲು ಮಾತ್ರ ಅವಕಾಶವಿದೆ.<br>ನಿರ್ಧಿಷ್ಟ ಆಳದವರೆಗೆ ಕೆಂಪು ಕಲ್ಲು ಗಣಿಗಾರಿಕೆ ನಡೆಸಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-32 ರಂತೆ ಲೈಸೆನ್ಸ್ ಪಡೆದು ಗಣಿಗಾರಿಕೆ ನಡೆಸಬಹುದಾಗಿದೆ. |
| ಉ) | ಹೀಗೆ ಕೆಂಪು ಕಲ್ಲುಗಣಿಗಾರಿಕೆ ಮಾಡಿದ ಪರವಾನಿಗೆದಾರರು/ಲೀಸ್ ದಾರರು/ ಭೂಮಾಲೀಕರು ಸದರಿ ಭೂಮಿಯನ್ನು ಸಮತಟ್ಟು ಮಾಡಿದ ಬಗ್ಗೆ ಮತ್ತು ಕೃಷಿ ಉದ್ದೇಶಕ್ಕೆ ಬಳಸುತ್ತಿರುವ ಬಗ್ಗೆ ಗಣಿ ಇಲಾಖೆ ಕಂದಾಯ ಮತ್ತು ಕೃಷಿ ಇಲಾಖೆ ಮೂಲಕ ಖಚಿತಪಡಿಸಿಕೊಳ್ಳಲಾಗುತ್ತಿದೆಯೇ; | ಕರಾವಳಿ ಮತ್ತು ರಾಜ್ಯದ ಇತರೆ ಜಿಲ್ಲೆಗಳಲ್ಲಿ ದೊರೆಯುವ ಕೆಂಪು ಕಲ್ಲು ತೆಗೆಯುವ ಸಂಬಂಧ ಸರಳೀಕೃತ ನಿಯಮಗಳನ್ನು ಜಾರಿಗೊಳಿಸಲು ಸರ್ಕಾರದಿಂದ ದಿನಾಂಕ: 17-09-2025ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-3-A ತಿದ್ದುಪಡಿ ತರಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ: ಸಿಐ-ಎಂಎಂಎನ್/ 254/2025, ದಿನಾಂಕ: 30-09-2025 ರಲ್ಲಿ ನಿಯಮ-3-A ರಂತೆ ಕೆಂಪು ಕಲ್ಲು ತೆಗೆಯುವ ಸಂಬಂಧ ಮಾರ್ಗಸೂಚಿಗಳನ್ನು ಜಾರಿ ಮಾಡಿದ್ದು, ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ತಜ್ಞರ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ಶಿಫಾರಸ್ಸಿನಂತೆ, ಪಟ್ಟಾ ಜಮೀನುಗಳನ್ನು ವ್ಯವಸಾಯ ಯೋಗ್ಯ ಜಮೀನಾಗಿ ಪರಿವರ್ತಿಸುವ ಉದ್ದೇಶದ ಚಟುವಟಿಕೆಗಳಲ್ಲಿ ಲ್ಯಾಟರೈಟ್ ಬ್ರಿಕ್ಸ್ ತೆಗೆದ ನಂತರ ಕಡ್ಡಾಯವಾಗಿ ಸದರಿ ಪ್ರದೇಶವನ್ನು ಕೃಷಿ ಯೋಗ್ಯ ಜಮೀನನ್ನಾಗಿ ಪರಿವರ್ತಿಸಲು ಸಮತಟ್ಟುಗೊಳಿಸುವ ಅಥವಾ ಬೇರೆ ಉದ್ದೇಶಗಳಿಗೆ ನೀಡಲಾದ ಕಾರ್ಯಾನುಮತಿಗಳ ಸಂಬಂಧ ಸುರಕ್ಷತೆಗಾಗಿ ಕಾರ್ಯಾದೇಶದ ಅವಧಿ ಮುಗಿದ ನಂತರ ಕಡ್ಡಾಯವಾಗಿ ಕಾರ್ಯಾನುಷ್ಠಾನಗೊಳಿಸಲು ನಿರ್ದೇಶನ ನೀಡಲಾಗಿದೆ. |

ಸಂಖ್ಯೆ: ಸಿಐ-ಎಂಎಂಎನ್/327/2025

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.